ಅ) ದಿನಾಂಕ 1–4–89 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಜಿಲ್ಲಾ ಪರಿಷತ್‌ಗಳಿಂದ ಮಂಜೂರಾದ ಪಶು ಚಿಕಿತ್ಸಾಲಯಗಳು ಎಷ್ಟು;

ಆ) ಅವುಗಳಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದ ಪಶು ಚಿಕಿತ್ಸಾಲಯಗಳು ಎಷ್ಟು;

ಇ) ಮಾನ್ಯತೆ ಪಡೆಯದೆ ಇರುವ ಪಶು ಚಿಕಿತ್ಸಾಲಯಗಳ ಬಗೆಗೆ ಸರಕಾರವು ಕೈಕೊಂಡ ಕ್ರಮವೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) 378

ಆ) 45

ಇ) ಸಕ್ರಮಗೊಳಿಸಲು ಆಲೋಚಿಸಲಾಗುವುದು.

ವಲಯ ಅರಣ್ಯ ಅಧಿಕಾರಿಗಳಿಂದ ಸರಕಾರಕ್ಕೆ ಬರತಕ್ಕ ಅನಂಗೀಕೃತ ಹಣದ ವಿವರ

2100: ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):–

ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1980 ರಿಂದ ವಲಯ ಅರಣ್ಯ ಅಧಿಕಾರಿಗಳಿಂದ ಸರ್ಕಾರಕ್ಕೆ ಬರತಕ್ಕ ಅನಂಗೀಕೃತ ಹಣ ಎಷ್ಟು;

ಆ) ವಸೂಲಿಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು;

ಇ) ತೆಗದುಕೊಂಡಿರದಿದ್ದ ಪಕ್ಷದಲ್ಲಿ ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯಸಚಿವರು):–

ಅ) ರೂ. 82.84 ಲಕ್ಷಗಳು.

ಆ) ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ ನಿಯಮಾವಳಿಗಳ ಮೇರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅನಂಗೀಕೃತ ಹಣವನ್ನು ವಸೂಲಿ ಮಾಡಲು ಹಾಗೂ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಪ್ರಾಧಿಕಾರ ಹೊಂದಿರುತ್ತಾರೆ. ಈ ಅಧಿಕಾರಿಗಳು ವಸೂಲು ಮಾಡುವ ಆದೇಶವನ್ನು ಹೊರಡಿಸಿದಾಗ ಅನೇಕ ಪ್ರಕರಣಗಳಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಈ ಆದೇಶಕ್ಕೆ ತಡೆಯಾಜ್ಞೆ ನೀಡಿ, ಇಲಾಖೆಯ ವಿಚಾರಣೆಯನ್ನು ನಡೆಸಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಿರುತ್ತದೆ.

ಅದರಂತೆ 47 ಜನ ವಲಯ ಅರಣ್ಯ ಅಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ವಿರುದ್ಧ ದೋಷಾರೋಪಣಾ ಪಟ್ಟಿಗಳನ್ನು ಕೆಲವು ಘಟಕಾಧಿಕಾರಿಗಳು ಸಲ್ಲಿಸಿದ್ದು ಅವುಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ. ಅದರ ಪ್ರಗತಿಯು ವಿವಿಧ ಹಂತಗಳಲ್ಲಿರುತ್ತದೆ. ಇನ್ನುಳಿದ ವಲಯ ಅರಣ್ಯಾಧಿಕಾರಿಗಳ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ವಿರುದ್ಧ ಕೂಡಲೇ ದೋಷಾರೋಪಣಾ ಪಟ್ಟಿಗಳನ್ನು ತಯಾರಿಸಲು ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮತ್ತು ಇತರೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಇದಲ್ಲದೆ ಅನಂಗೀಕೃತ ಹಣವನ್ನು ವಸೂಲ್ಮಾಡಲು ಇಲಾಖೆಯ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. .

1. ಆಗಿಂದಾಗ್ಗೆ ಸುತ್ತೋಲೆ ಸೂಚನೆಗಳನ್ನು ಹೊರಡಿಸಲಾಗಿದೆ.

2. ಘಟಕ ಮತ್ತು ನಿಯಂತ್ರಣಾಧಿಕಾರಿಗಳಿಗೆ ಆಗಿಂದಾಗ್ಗೆ ಅರೆ ಸರ್ಕಾರಿ ಪತ್ರಗಳ ಮೂಲಕ ಸೂಚನೆಗಳನ್ನು ನೀಡಲಾಗಿದೆ.

3. ನಿಯಂತ್ರಣಾಧಿಕಾರಿಗಳ ಸಭೆಗಳನ್ನು ಕರೆದು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿ, ಅವುಗಳ ನಡವಳಿಕೆಗಳಲ್ಲಿ ಮಾರ್ಗದರ್ಶನ ನೀಡಲಾಗಿದೆ.

4) ಪುನರ್ ವಿಮರ್ಶೆಗಳನ್ನು ವಿಭಾಗ ಮಟ್ಟದಲ್ಲಿ, ವೃತ್ತ ಮಟ್ಟದಲ್ಲಿ ಮುಖ್ಯ ಲೆಕ್ಕಾಧಿಕಾರಿಯವರು ಮತ್ತು ಅವರ ಸಿಬ್ಬಂದಿಯವರು (1991–92ರಲ್ಲಿ) ಒಂದು ಬಾರಿ ನಡೆಸಿರುತ್ತಾರೆ. ನಂತರ ರಾಜ್ಯಮಟ್ಟದಲ್ಲಿ ಆಗಿನ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ನಿ) ರವರು ಒಂದು ಸಾರಿ ವೃತ್ತವಾರು ಪುನರ್ ವಿಮರ್ಶೆಗಳನ್ನು ನಡೆಸಿರುತ್ತಾರೆ. (ಅಕ್ಟೋಬರ್ 1992ರಿಂದ ನವೆಂಬರ್ 1992 ರವರೆಗೆ). ಮತ್ತೊಂದು ಬಾರಿ ಮುಖ್ಯ ಲೆಕ್ಕಾಧಿಕಾರಿಯವರು ಮತ್ತು ಸಿಬ್ಬಂದಿಯವರು ವೃತ್ತಗಳ ಪತ್ರಾಂಕಿತ ವ್ಯವಸ್ಥಾಪಕರೊಡನೆ ಪುನರ್ ವಿಮರ್ಶೆ (ಮಾರ್ಚ್ 1993ರಲ್ಲಿ) ನಡೆಸಿರುತ್ತಾರೆ. ಇವುಗಳ ನಡವಳಿಕೆಗಳಲ್ಲಿ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.

ಇ) ಮೇಲೆ ತಿಳಿಸಿದಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಇದನ್ನೇ ಮುಂದುವರಿಸಲಾಗುವುದು.

ರಾಜ್ಯದ ವಾಸ್ತವಿಕ ಜಾನುವಾರುಗಳ ಸ್ಥಿತಿ ಮತ್ತು ಅವುಗಳ ಆರೋಗ್ಯದ ನಿರ್ವಹಣೆಗೆ ಒದಗಿಸಿರುವ ಸೌಕರ್ಯ

(2120): ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):–

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಾಸ್ತವಿಕ ಜಾನುವಾರುಗಳ ಸ್ಥಿತಿ ಮತ್ತು ಅವುಗಳ ಆರೋಗ್ಯದ ನಿರ್ವಹಣೆಗೆ ಒದಗಿಸಿರುವ ಸೌಕರ್ಯಗಳಾವುವು;

ಆ) ರಾಜ್ಯದಲ್ಲಿ ಸಾಕು ಪ್ರಾಣಿಗಳ ಅಭಿವೃದ್ಧಿಗಾಗಿ ಯಾವುದಾದರೂ ಸಂಶೋಧನಾ ಮತ್ತು ತರಬೇತಿಯ ವಿಭಾಗ ಇದೆಯೇ;

ಇ) ರಾಜ್ಯ ಸರ್ಕಾರವು ಪಶು ಸಂಗೋಪನಾ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಆಲೋಚನೆ ಇದೆಯೇ ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) ಎ) ಒಟ್ಟು ಜಾನುವಾರುಗಳ ಸಂಖ್ಯೆ 249.84 ಲಕ್ಷ ಕೋಳಿಗಳ ಸಂಖ್ಯೆ. 156.94 ಲಕ್ಷ.
ಬಿ) ರಾಜ್ಯದಲ್ಲಿರುವ ಪಶು ವೈದ್ಯಕೀಯ ಸಂಸ್ಥೆಗಳಿಂದ.

ಆ) ಇದೆ.

ಇ) ಇಲ್ಲ.